TIGHT BINDING BOOK

ಹೂ-ಬಳ್ಳಿ

(ಕವನಗಳು)

ದೇಸಾಯಿ ದತ್ತಮೂರ್ತಿ
ಹುಬ್ಬಳ್ಳಿ

ಮನೋಹರ ಗ್ರಂಥ ಭಾಂಡಾರ
ಧಾರವಾಡ

ಬೆಲೆ ೧ ರೂಪಾಯಿ

ನನ್ನ ನುಡಿ !

ಕಮಲವಿದ್ದಲ್ಲಿ ನೀರೂ ಉಂಟು; ಕೆಸರೂ ಉಂಟು. ಕವನವಿಗ ಪ್ರಾಸವೂ ಉಂಟು ತ್ರಾಸವೂ ಉಂಟು. ಕಮಲವನ್ನು ಕುಯ್ದು ತ ಕ್ಕೈಯಲ್ಲಿ ಕೊಟ್ಟರೆ, "ಆಹಾಹಾ! ಏನು ಚೆಲುವು, ಏನು ಮಿದುವು, ಃ ಕಂಪು ಎಂದು ಹರುಷಪಡುವವರುಂಟು. ಕವನವನ್ನು ಅಂದು ತೋರಿಸಿ "ಆಹಾಹಾ! ಏನು ಧಾಟಿ, ಏನು ಪ್ರಾಸ, ಏನು ಭಾವ ಎಂದು ಸಂತಸಪಡು ರುಂಟು. ಕೆಸರಿಗೆ ಹೆದರಿಯೊ, ನೀರಿಗೆ ಬೆದರಿಯೊ ಕಮಲದ ಕಂಪು ಸೊಂ ಎರವಾಗುವವರು ಉಂಟು. ಕಮಲದ ಕಂಪು ಸೊಂಪಿಗೇ ಬಾಯ್ಬಿ ನೀರು ಕೆಸರುಗಳಲ್ಲಿ ಸಿಕ್ಕಿಕೊಳ್ಳುವವರೂ ಉಂಟು.

ಅಂತೂ, ಕೆಸರಿಲ್ಲದ ನೀರಿಲ್ಲ; ನೀರಿಲ್ಲದ ಕೆಸರಿಲ್ಲ! ಕೆಸರೂ, ನೀ ಇಲ್ಲದಲ್ಲಿ ಕಮಲವಿಲ್ಲ; ಕಮಲವಿಲ್ಲದಲ್ಲಿ ಕಂಪು ಸೊಂಪು ಇಲ್ಲ. ಹೀಗಿದೆ ಸೌಂದರ್ಯೋಪಾಸನೆ! ಹೀಗೆಯೇ ಕಾವ್ಯೋಪಾಸನೆ! ಭಾವದ ಆಳ, ಮಾ ಮೇಳ, ರೀತಿಯ ತಾಳ ಸೊಗಸಾಗಿ ಒಲಿಯಬೇಕಾದರೆ, ಕವನ ಕಮಲಗ ರಸಿಕ-ಭೃಂಗವೃಂದವು ಬೇಕು ಅದಕ್ಕಾಗಿ ನನ್ನ ಬಾಳ ಕೆಸರಿನ ಆಳ ತಿಳಿವು ನೀರಿನ ಮೇಳದಲ್ಲಿ ಕಾಲಕಾಲಕ್ಕೆ ಅರಳಿದ ಕವನ ಕಮಲಗಳನ್ನು "ಬಾ, ಭೃಂಗವೆ ಬಾ,....ಕವನ ಕೋಶದೀ ಕಮಲಗರ್ಭದಲಿ ಪರಾಗವೊ ಗಿಹುದು; ನಿನ್ನ ಸುಖಸ್ಪರ್ಶವೂ ಸಾಕು; ಹೊಸ ಸೃಷ್ಟಿಯು ಬರಬಹುದು" ಎಂದು ನೀಡಿಬಿಡುವ ಸಾಹಸ ಮಾಡಿದ್ದೇನೆ.

ಈ ಕವನ ಕಮಲಗಳು ಕನ್ನಡಿಗರ ಕೈಯಲ್ಲಿ ಬರಲು ಕಾರಣರಾದ, ಶ್ರೀ. ಕುಲಕರ್ಣಿ ವಸಂತರಾಯರು, ಬಿ. ಎ, ಬಿ ಟಿ. ಹುರಳಿಕುಪ್ಪಿ, ಶ್ರೀ. ಕುಲಕರ್ಣಿ ಗುರುರಾಯರು, ಪೋ ಸ ಇನಸ್ಪೆಕ್ಟರ, ಮಾಧವನಗರ, ಶ್ರೀ ಹುಲಿಗಿ ಶ್ರೀನಿವಾಸರಾಯರು ಬಿ. ಎ. ಕೊಪ್ಪಳ, ಈ ಮೂವರು ಜೀ ಗೆಳೆಯರಿಗೂ, ಹೊದಿಕೆಚಿತ್ರ ಬರೆದುಕೊಟ್ಟ ಶಿಗ್ಗಾವಿ ಶ್ರೀನಿವಾಸರಾಯ ಮುದ್ರಣಕಾರ್ಯದಲ್ಲಿ ತಮ್ಮ ನೆರವನ್ನು ನೀಡಿದ ಮನೋಹರ ಗ್ರಂಥಭಾ .. ದವರಿಗೂ, ವಿಜಯ ಮುದ್ರಾಲಯದವರಿಗೂ ತುಂಬಾ ಆಭಾರಿಯಾಗಿ ನೆಂದು ನುಡಿಯಬಯಸುವೆನು. ಅಲ್ಲದೆ, ಕನ್ನಡ ವರಕವಿ "ಅಂಬ ತನಯದತ್ತ"ರು ಈ ನನ್ನ ಕಾವ್ಯಕನ್ನಿಕೆಗೆ ಹರಕೆಯ ಕುಂಕುಮಪ "ದೀರ್ಘ ಸುಮಂಗಲೀ ಭವ" ಎಂದು ಆಶೀರ್ವದಿಸಿದುದು, ಹೆಣ್ಣಿನ ತ ಹೆಮ್ಮೆಯ ಮಾತು!

—ದೇಸಾಯಿ ದತ್ತಮ

ಅರ್ಪಣೆ

ತಾಯಿಯ
ಅಡಿದಾವರೆಯಲ್ಲಿ
ನನ್ನ ಈ ಮೊದಲ ಕೃತಿ ವಿಾಸಲು

—ದತ್ತಮೂರ್ತಿ

ಕನ್ನಡ ವರಕವಿ : ಅಂಬಿಕಾತನಯದತ್ತರ ಆಶೀರ್ವಾದ

"ಪ್ರಿಯ ದತ್ತಮೂರ್ತಿ,
ನಿನ್ನ ಒಕ್ಕಣಿಕೆಯ ವಿಲಾಸ, ಬರವಣಿಗೆಯ ವೈಭವ
ಅಲ್ಪದರಲ್ಲಿಯೂ, ಅತ್ಯಂತವನ್ನು ಕಂಡರೆ—
—ಅದೇ ಆನಂದಸ್ಪರ್ಶ"

ದ. ರಾ. ಬೇಂದ್ರೆ

ಪರಿವಿಡಿ

●

ನನ್ನಾಕಿ

ನನ್ನಾಕೀ ಏ ನನ್ನಾಕಿ.

ಮೈದಣಿದು, ಮನದಣಿದು, ಮರಗಟ್ಟಿ ಬಂದಾಗ,
ಮುಗುಳಿನ ನಗೆ ಹಿಗ್ಗ ನೀಡುವಾಕೀ
ಉರುಟು ಮನಕೆ ನಿನ್ನ ಎಳೆಬಳ್ಳಿ ಹಬ್ಬಿಸಿ
ಬಾಳಲ್ಲಿ ಹಬ್ಬವ ಮಾಡುವಾಕೀ –ನನ್ನಾಕಿ

ಸಣ್ಣಾಗಿ ಹಣ್ಣಾಗಿ, ಸವಿದುಂಬಿ ಚೆಲುಗೊಂಬಿ
ಕುಣಿದು ಕುಣಿಸುತ ಆಟ ಆಡೊವಾಕಿ
ಮಾತು ಮುತ್ತಿನ ಎಳಿ, ನಗೆಯು ಕಿತ್ತಿಳಿ ತೊಳಿ
ರಸದುಂಬಿ ದನಿ ಜೇನ ಸುರಿಸುವಾಕಿ –ನನ್ನಾಕಿ

ಮನಸು ಮೈಯಿಗೆ ಬೇಕು ಎನಿಸೊ ತಿನಿಸ ತಂದು
ಕಾಲಕಾಲಕೆ ತುಂಬಿ ಇರಿಸುವಾಕಿ,
ದಯೆಯು ಮಾಯೆಯು ಎರಕ ಬಂತು ಸುಗ್ಗಿಯ ಭರಕ
ವಿಫಲಕು ಸಾಫಲ್ಯ ಬೆರೆಸೊವಾಕಿ. –ನನ್ನಾಕಿ

ಮನೆಯೊಳಗ ನಿನ ಹೆಜ್ಜಿ ನವಿಲಕಾಲಿನ ಗೆಜ್ಜಿ
ಬಾಳಿನ ತಾಳಕ ಇಡುವಾಕಿ
ನಕ್ಕು ಉಕ್ಕಿಸ ಬಲ್ಲಿ ಮುಕ್ಕು ಮಲ್ಲಿಗೆ ಚೆಲ್ಲಿ
ಬದುಕನ್ನು ಗಮಗಮ ಇರಿಸುವಾಕಿ –ನನ್ನಾಕಿ

ಕೊರತೆ ಎಲ್ಲಕು ನೀನು ಒರತೆಯು ನೀರುತೆ
ಹನಿಹನಿ ಹನಿಯಾಗಿ ಚಿಮ್ಮುವಾಕಿ
ಸಂಗಾತಿ ನಿನ ಪ್ರೀತಿ ಕೋಮಲ–ಘನ ರೀತಿ
ತುಂಬಿ ಮನೆ ಮನ ಜ್ಯೋತಿ ಬೆಳಗುವಾಕೀ –ನನ್ನಾಕಿ

ಗಾಳಿಯ ಪ್ರೀತಿ

ಹೂವಿನೆಸಳ ಎಳೆದಂತೆ ಗಾಳಿ ಗಲ್ಲವನು ಸವರಿ ಸೋಂಕಿ
ಚಿಗುರ ಬೆರಳ ಸುಳಿಗುರುಳ ಸುತ್ತಿ ಅಳಿಯಾಳಿಗಳನು ನೂಂಕಿ
ನಲುಮೆವಾಡನದು ಕಳ್ಳಗತ್ತಿನಲಿ, ಸಣ್ಣದನಿಯುಲುಲಿದು
ಸುಸಿಲ ಸೂಚಿಸುವ ಇನಿಯನಂತೆಯದು ಸುಳಿದು ಬಹುದು ನಲಿದು.

ನೀಲಿ ರೇಶಿಮೆಯ ವಸನಕದೋ ಜರತಾರಿ ಚಿಕ್ಕಿ ಕೆಚ್ಚಿ
ಮುಸುಕ ಹಾಕಿದರು ಒಳಗೆ ಸುಳಿಯುತಿದೆ ತನಗೆ ತಾನೆ ಮೆಚ್ಚಿ
ಬಳ್ಳಿದೋಳ, ಅದೊ ಬೆರಳ ಚಿಗುರ ಕಣ್, ಮೊಗವ ಮುಟ್ಟಿ ತಟ್ಟಿ,
ಅಲ್ಲಾಡಿಸುತ್ತ ಚೆಲ್ಲಾಟವಾಡುತಿದೆ, ಎಂಥದವ್ವ ಎಟ್ಟಿ!

ತಲೆವಾಗಿಲನ್ನು ತಟ್ಟುತ್ತ ಅವರೆ ಬಂದರೋ ಎಂದು ಎದ್ದೆ
ಮೈಮುರಿದು ಅಲಸಿಕೆಯ ಕಳೆದು, ಕಾಡಿದರು ಸುದ್ದ ಮೊದ್ದ ನಿದ್ದೆ.
ಬಾಗಿಲವ ತೆರೆದೆ ಇದೆ ಏನು ಅಲ್ಲಿ ಎಲ್ಲವೂ ಬರಿಯ ಬಯಲೇ
ಈ ಕಳ್ಳ ಗಾಳಿಯಾಟವನು ಹುಚ್ಚಿ ನಾನೆಂತು ತಿಳಿಯ ಬಲ್ಲೆ.

ಇಕೊ ಸೆರಗ ಹಿಡಿದು ಬೆನ್‌ಹಿಂದೆ ಸುಳಿಯುತಿದೆ ಹುಡುಗ ಹೆಜ್ಜೆಗೆಜ್ಜೆ
ಉಲಿವಂತೆ ಕುಣಿದು ಮೈಮೊಗವನಡರಿ ಅಕೊ ಗಲ್ಲಗಲ್ಲ ಉಜ್ಜಿ
ತಡಿಲಾರೆನವ್ವ ಈ ತುಂಟತನವ ಏನಾರೆ ಮಾಡಲಿನ್ನು
ಈ ದೂರನವರ ಎದುರೆಂತು ಹೇಳಲೀ ಗಾಳಿ ನನ್ನ ಹೊನ್ನು.

ನನಗು ನನ್ನ ಆ ಪ್ರಾಣನಾಥನಿಗು ಪ್ರಾಣದುಸಿರು ನೀನು
ಅಡಿಗೆಯಲ್ಲಿ ಉಪ್ಪೆಂತೊ ಅಂತೆ ನೀ ಜೀವ ಜಗದ ಜೇನು
ಮಾತೆ ಮಮತೆ, ಆ ಪತಿಯ ಪ್ರೀತಿ, ಹಸುಗೂಸಿನಂಥ ಹೃದಯ
ಎರಕಗೊಂಡ ಏ ಗಾಳಿ, ನಿನ್ನ ನಾ ಕೇಳಿ, ಕಂಡೆ ಉದಯ!

ಅಪ್ಪು ಬಾ

ಅಪ್ಪು ಬಾರೇ ಎನ್ನ ನೀರದದ ನೀರೆ!

೧

ಏ ನೀರೆ ನನಗಾಗಿ, ತುಂಬು ಮೈಯನು ತೂಗಿ,
ಬಳಿಸಾರಿ ಬಂದೊಮ್ಮೆ ಅಪ್ಪು ಬಾರೇ
ಅಪ್ಪು ಬಿಗಿದಪ್ಪು ಬಾ, ಮೈಗೆ ಮೈ ಕೂಡಿರಲಿ
ಮನಕೆ ಮನ; ಹಿತದ ಜತೆ ಸವಿಯು ಸೂರೆ!

ಕಡೆತನಕ ಈ ಜೋಡ ಮೌನದರ್ಘವ ನೀಡ
ನಿಶ್ಶಬ್ದದಲಿ ಹಾಡ ಚಿಗುರು ಕೊನರಿ
ಹಾಲು ಸಕ್ಕರೆಯಲ್ಲಿ, ಕರುಳು ಅಕ್ಕರೆಯಲ್ಲಿ
ಬೆರೆತಂತೆ ಮರೆತಂತೆ ಅಪ್ಪು ಬಾರೇ

೨

ಹಸಿರು ಕುಸುರಾಡುತಿದೆ, ನೀರು ನಲಿದಾಡುತಿದೆ
ಮೆಲುಗಾಳಿ ತೀಡುತಿದೆ ನೋಡೆ ಇಲ್ಲೆ
ತಿಂಗಳದೊ ತೊಳಗುತಿದೆ, ಚಿಕ್ಕೆ ಚಿಮುಕುತ್ತಲಿವೆ
ಬಾನ ನೀಲಿಮೆ ಮುಗುಳು ನಗೆಯ ಲಲ್ಲೆ

ಮೈಮರೆತು ಕಣ್ಮುಚ್ಚಿ ಗಲ್ಲಗಲ್ಲಕೆ ಹಚ್ಚಿ
ಅಪ್ಪುಗೆಯ ಹೆಪ್ಪುಗೆಯ ಜೇನಿನಲ್ಲೆ
ಸವಿಸವಿಯ ನೆನೆವುಗಳ, ಮೃದುಮಧುರ ಕನಸುಗಳ
ಬಾನಿನಲಿ ತೇಲೋಣ ಬಾರೆ ನಲ್ಲೆ

೩

೩

ರೇಸಿಮೆಯ ಮೈದಂಪು ಮೆಲ್ಲುಸಿರ ತನಿಗಂಪು
ಇನಿದನಿಯ ಇಂಪು ಸಾನ್ನಿಧ್ಯದಲ್ಲಿ
ಬಚ್ಚ ಬಯಲಿನ ಬಾನ, ತುಂಬುದಿಂಗಳ ಜೇನ
ಸವಿಸವಿದು ಮತ್ತೇರಿ ಮಬ್ಬಿನಲ್ಲೀ

ಎರಡು ಒಂದಾಗುವಾ, ಹುರುಡಿನಲಿ ಕೂಡುವಾ
ಆಟವನು ಆಡೋಣ ಆಟದಲ್ಲಿ
ಮಾತಿಗೂ ನಿಲುಕದಿಹ, ಯೋಚನೆಗು ಎಟಕದಿಹ
ಬುದ್ಧಿ ಮನವರಿಯದಾನಂದದಲ್ಲೀ

ಕಲ್ಪಾಂತ ತನಕ ನೀ ಅಪ್ಪು ಬಾರೇ
ಅಪ್ಪು ಬಾರೇ ಎನ್ನ ಸೀರದದ ನೀರೆ.

ಮುಸುಕು-ನಸುಕು

ತಾಯ ಹೊಟ್ಟೆಯ ಮೊಳದ ಮುಸುಕಿನಿಂ ಹೊರಬಂದು
ಕಂಡ ಕೋಣೆಯಲಳುತ ವರುಷ ಬೆಳೆದೆ
ಬಾಯ ಜೊಲ್ಲಲಿ, ತೊದಲಲುಲಿಯುತಂಬೆಯಗಾಲ–
–ಲೊಂದೆರಡು ವರುಷ ಮನೆಯಲ್ಲಿ ಕಳೆದೆ

ಮುಗಿಲ ಮುಸುಕಿನ ಕೆಳಗೆ ಹದಿನಾರು ವರುಷಗಳ
ಅಕ್ಕರವ–ಆಟಪಾಟವ ಕಲಿತೆನು
ದಿಗಿಲುಗೊಳ್ಳುತ, ಹೆಣ್ಣಜತೆಯ ಸವಿ ಸವಿಯುತ್ತ
ನನ್ನ ಸಮ ಯಾರಿಲ್ಲವೆನೆ ಮಲಿತೆನು

ಹೆಣ್ಣು ಹೆರಿಗೆಯ ನೋವ ಕಂಡು ಕಳವಳಗೊಂಡು
'ನನ್ನ' ಯೋಚನೆಯ ನಾ ನೆನೆಯುತಿರಲು
ಕಣ್ಣು ತೆರೆಯಿತು ಅಪ್ಪ ಅಣ್ಣ ಅಮ್ಮರ ಮರಣ
ಜನನ ಮರಣದ ಕೂಟಪ್ರಶ್ನೆ ಉರಲು !

ಕೋಣೆ ಕತ್ತಲ ಕಳೆದು ಮನೆಯಂಗಳದ ಬೆಳಕು
ಕಂಡಷ್ಟಕೇನೆ ನಾ ಹರುಷಗೊಂಡೆ
ಓಣೆಯಂಗಳದಿಂದ, ಊರುಕೇರಿಯನಲೆದು
ಹೊಂಡ ಹೊಳೆ ಗಿಡ ಬೆಟ್ಟ ಚೆಲುವನುಂಡೆ

ಹಗಲಿರುಳು ಜನನ ಮರಣಗಳ ಮೇರೆಯ ಮೀರಿ
ಓಂಕಾರ ಝೇಂಕಾರ ದನಿಯ ಜೇನು.
ಮುಗಿಲ ಹೆಗಲನ್ನೇರಿ, ಚಿಕ್ಕೆ ಚಂದ್ರರ ಸೇರಿ
ಬಾನ ಮುಸುಕನು ಸರಿಸೆ ಕಾಂಬುದೇನು?

ನೀರೆ

ಪುಟ ಪುಟ ಮೈ ಬಳಕಿಸುತ್ತ
ತುಟಿ ಕಣ್ಣ ತುಂಬ ತುಳುತುಳುಕಿಸುತ್ತ
ಮಿದುಗಲ್ಲ ಮುಗುಳು ನಗೆ ಅರಳಿಸುತ್ತ
ಎಳೆದೋಳ ಕೊರಳ ನೀ ಹೊರಳಿಸುತ್ತ
ಬಳಿಸಾರೆ ಬಾರೆ ನೀರೆ
ಸಂಸಾರ ಸಫಲತೆಯು ತೋರೆ!

ಹಿತಮಿತದಿ ನಲುಮೆ ನುಡಿ ಉಲಿದು ಉಲಿದು
ಜತೆಜತೆಗೆ ಜತೆಯ ಹಿತ ನೀಡಿ ನಲಿದು
ಮೈ ಎರಡು ಉಸಿರು ಒಂದೆಂದು ಬಲಿದು
ಬಿಗಿತಾಗಿ ನೂಗಿ ಜೀವನದಿ ಸಾಗಲಿದು
ನೀಡೆ ನೆರವ ನೀರೆ
ದಡ ಎರಡು ಜೀವನವು ಮೀರೆ!

ಮೈಸೊಕ್ಕು ದಿಗಂತಕೆ ಚಾಚುತಿರಲು
ಹರೆಹುಚ್ಚು ದಿಕ್ಕುಗಳ ಬಾಚುತಿರಲು
ಬಗೆ ಹಕ್ಕಿ ರೆಕ್ಕೆಗಳ ಬಡಿಯುತಿರಲು
ಈ ಜೀವ ಆಸರಕೆ ಮಿಡಿಯುತಿರಲು
ಕೊಡು ಕೈಗೆ ಕೈಯ ನೀರೆ
ಈ ಬಾಳ ಕಾಳಗದಿ ಹೋರೆ
ಬಳಿಸಾರಿ ಬಾರೆ ನೀರೆ!

ಮಾಧವನೇತಕೆ ಬಾರ?

ಸಖೀ, ಮಾಧವನೇತಕೆ ಬಾರ,
ತಡೆದಾರ ಏನ ಯಾರಾರ

ಸವಿ ಸಂಜೆ ಸೊಬಗ ಸುರಿಸ್ಯಾವ
ಕೆಂಬಣ್ಣ ರವಿಯು ಮೆರಿಸ್ಯಾವ
ಸುಳಿಗಾಳಿ ಗಂಧ ಬೆರಿಸ್ಯಾವ
ಈ ಸೌಖ್ಯ ಸುಳ್ಳೆ ಅನಿಸ್ಯಾವ- ಸಖಿ.

ಹೊಳಿಹಳ್ಳ ಹಾಡ ಹಾಡ್ಯಾವ
ಗಿಡ ಬಳ್ಳಿ ನಿಂತು ನೋಡ್ಯಾವ
ಗರಿಗೆದರಿ ಹಕ್ಕಿ ಆಡ್ಯಾವ
ಈ ಸೊಗಸು ನನ್ನ ಕಾಡ್ಯಾವ- ಸಖಿ.

ಚಿಕಿ ಚಿಕ್ಕಿ ಕಣ್ಣ ಮಿಟಕ್ಯಾವ
ಎಳಿ ಸೋಮರಸವ ತೊಟಕ್ಯಾವ
ತಿಳಿ ನೀಲಿ ಮನಕ ಎಟಕ್ಯಾವ
ಇವು ಎಲ್ಲ ನನ್ನ ಕುಟಕ್ಯಾವ- ಸಖಿ.

ಬಂದಾರ!

ಬಂದಾರೊ ಚಂದಿರಾ,
ಮಂದಾರ ಮೈಯವರು
ತಂದಾರೊ ಒಲವಾ
ನಂದನದ **ಚೆಲುವಾ!**

ಹೂವಿನ ಹುಡಿಗೇರು,
ನವಿಲಿನ ನಡಿಗೇರು,
ಬಳ್ಳಿಯ ಬಳುಕೇರು ಬಂದಾರೋ.
ತಿಂಗಳ ಇರುಳಾಗ ಮಿಂದಾರೋ,
ಮೈಕಾಂತಿ ಬಿರಿಹಚ್ಚಿ ನೋಡ್ಯಾರೋ
ಮನಸಿನ ಮರುಳಾಗ ಆಡ್ಯಾರೋ,
ಭೂಲೋಕ ನಂದನ ಮಾಡ್ಯಾರೋ.
ಬಂದಾರೋ— ಮಿಂದಾರೋ, ತಂದಾರೋ ಚೆಲುವಾ.

ಚೆಂದನ್ನ ಚೆಲುವೇರು,
ಮನಸಿನ ಒಲುವೇರು
ಕರುಳಿನ ತಿರುಳೇರು ಬಂದಾರೋ
ನಲುಮೆ ಮೈಗೊಂಡಂತೆ ನಿಂದಾರೋ,
ಬಗೆ ಬಗೆ ಆಟವ ಹೂಡ್ಯಾರೋ
ಒಲವಿಗೆ ಚೆಲುವನು ತೀಡ್ಯಾರೋ
ಮುದ್ದುಳ್ಳ ಮಾಟವ ಮಾಡ್ಯಾರೋ.
ತುಂಬ್ಯಾರೋ — ನಂಬ್ಯಾರೋ — ತಂದಾರೊ ಒಲವಾ!

ಚೆಲುವು

ಮುಗುದೆಯ ಮನ ಲತಾ ಸುಮನ
ಒಲವೇ ಮೆಲು–ಮಾರುತ!
ಮೈಯ ಪೆಂಪು ನಲುಮೊಗಂಪು
ಚೆಲುವೇ ಸಿರಿ ಬೀರುತ!

ಕನಸು ತೇಲಿ ಕಣ್ಣ ಆಲಿ,
ಅರೆ ಮುಚ್ಚಿದ ತಿಂಗಳು!
ಹರೆಯದುಸಿರು ಕಲೆಯ ಕುಸುರು
ಕೋಮಲವೆಲೆ ಅಂಗಳು!

ಕುರುಳ ಉರುಳು ನಲುಮೆದಿರುಳು
ಹೆಣೆಯುತಿಹುದೊ ಬಲೆಯನು;
ನಯನ ತಾರೆ ಬೆಳಕ ಬೀರಿ
ತೋರುತಿಹುದು ನೆಲೆಯನು;

ಕೆಂಪು ಅಧರ ರಸವು ಮಧುರ
ನುಡಿಯು ನುಡಿಯೆ ಕೋಗಿಲ!
ಎಳೆಯ ತೋಳು ಪ್ರೀತಿ ಬಾಳು
ಬೆಳೆದು ತೆರೆಯೆ ಬಾಗಿಲ!

ಎದೆಯ ಹದವ ಮನದ ಮುದವ
ಒದವಿಸುತಿದೆ ಆಕೃತಿ!
ಇದು ಮೀಸಲು; ಎದೆ ಸೂಸಲು
ನಿನದಿಸುತಿದೆ ಈ ಕೃತಿ!

ಪ್ರೀತಿ-ರೀತಿ

ತಿಳಿಗೊಳದ ತಡಿಯ ಬಳಿ ತರಳೆ
ಮೈ ಬಳ್ಳಿ ಹೃದಯ ಹೂ ಅರಳೆ.

ತರ ತರ ತರಂಗಗಳ ಮಾಲೆ ಮಾಲೆ
ಚಂದ್ರಾಮ ಚಿಕ್ಕಿ ಕುಣಿ ಕುಣಿವ ಲೀಲೆ
ಕಾಣುತಲಿ ಮನಸು ಮೈ ಸೋಲೇ
ಏನಾಟ ನಿನ್ನದಿದು ಬಾಲೇ—

ಗರಿಗೆದರಿನಿಂತ ನವಿಲಾಗಿ ತೂಗಿ,
ಮರತಬ್ಬಿ ನಿಂತ ಬಳ್ಳ್ಯಾಗಿ ಬೀಗಿ.
ಮರ-ಪ್ರೀತಿ ಬಾಳಿನಲಿ ಸಾಗಿ.
ಗಡುಸನ್ನು ಬಗ್ಗಿಸಿದೆ ಬಾಗಿ—

ಸಂಸಾರ-ವೆಂಬುದೀ ಸರಸಿ, ಸರಸಿ,
ನಲಿನಲಿವ ನಲಿನಿಯರ ಬಿರಿಸಿ ಮೆರೆಸಿ,
ಪ್ರಜೆಯಲಿ ಕಂಪನೀ ಸುರಿಸಿ,
ಮುಟ್ಟಿಸಿದೆ ಗುರಿಯ ನನ್ನರಸಿ—

ಮನಮನದ ನೋಟವಿದು, ಆಟ ಮಾಟ!
ಕಲ್ಲೋಲ ಮಾಲಿಗಳ ಓಟ ಬೇಟ!
ಚಂದ್ರಾಮ ಚಿಕ್ಕಿ ಗುರಿ ನೀಟ!
ಅಮೃತ ಜೀವನದ ಕೂಟ—

ಮೆಲುಗಾಳಿ ಗಂಧಗಳ ತಳಕು ಮಳಕು,
ಸವಿಹಾಲು ನೀರುಗಳ ಕಲಕು ಮಲಕು,
ಮೈಮನದ ಝುಳುಕು ಪುಳುಕು!
ಚೆಲುಪ್ರೀತಿ ಕಂಡುದಿದು ಬೆಳಕು—

ಪವನ! *

ಅರವಿಂದ ಮಕರಂದ ಕೊಂಡು ಬಾ ಪವನ
ಹರವು ಮುಂದೆಂದೆಂದು ತುಂಬಿ ಭುವನ
ರಸ ಋಷಿಯು ನೋಡಿ ಬಾ,
ಹೊಸ ಸಿದ್ಧಿ ಪಡೆದು ಬಾ
ಮುಗಿಲಿನೆತ್ತರವನ್ನು ಅಳೆದು ಬಾರಾ,
ಹಗಲೆ ಚಿಕ್ಕಿಗಳನ್ನು ತಿಳಿದು ತೋರಾ.

ಘನ-ಮೌನ ಸುಧೆಯಲ್ಲಿ ಮುಳುಗಿ ಬಾರಾ
ಮನದಿ ಬೆಳಕನು ಕಂಡು ಬೆಳಗಿ ತೋರಾ.
ಮಾಘ ಮುಗಿಲಾಗಿ ಬಾ
ಓಘ ಹೊನಲಾಗಿ ಬಾ
ಮುನ್ನೀರಿನಾಳದಲಿ ಮುಳುಗಿ ಬಾರಾ,
ಪನ್ನೀರ ಪರಿಮಳವ ನಳೆದು ತೋರಾ,

ಉಸಿರಾಗಿ ಜೀವನಕೆ ಹಸಿರ ಬೆಳೆಸಲಿಕೆ ಬಾ,
ಕುಸುರಾಗಿ ಜೀವನದಿ ಕಲೆಯ ಕುದುರಿಸಲು ಬಾ.
ಮಳೆಯ ಸುರಿಸಲಿಕೆ ಬಾ
ಇಳೆಯ ಮೆರೆಸಲಿಕೆ ಬಾ
ಸ್ವಾನಂದ ಸುಧೆಯೀಂಟಿ ಅಮರತೆಯ ತೂಗಿ ಬಾ
ಆನಂದ ನಂದನಾ ನಂದನನೆ ಆಗಿ ಬಾ

ಹೋಗಿ ಬಾರ್ರೈ ಗುರುವೆ
ನೀ ಹೋಗಿ ಬಾ !

---

* ಕವಿವರ್ಯ ಬೇಂದ್ರೆಯವರು 'ಅರವಿಂದ'ರ ಮೊದಲ ಬೆಟ್ಟಿಗೆಂದು ಪಾಂಡಿಚೆರಿಗೆ ಹೊರಟಾಗ, ಬೀಳ್ಕೊಡುವ ಕವನವೆಂದು ಬರೆದದು.

ಏಳು ಕಮಲಿನಿ

ಏಳು ಕಮಲಿನಿ, ಮುಗಿಯಿತು ರಜನಿ,
ಬೆಳಗಿತು ಬೆಳಗಿತು ಬೆಳಗಿತು ನೋಡೆ
ಅರುಣ ಕಿರಣ ಧರಣೀ– ಏ–
ತರುಣಿ, ತರಣಿ—ಶರಣೀ—ಕಮಲಿನಿ.

ಬಾನಿನ ಬಗೆ ಬಗೆ, ಬಣ್ಣದ ನಗೆ ನಗೆ
ಮಾವು ನೇರಳೆ, ಸೇಬು ಕಿತ್ತಳೆ
ಹನಿಹನಿ ರಸ ಒಸರೀ—ಈ—
ಹದುಳ ಬದುಕು ಹಸಿರೀ—ಕಮಲಿನಿ.

ಕಿರುದೆರೆ ಸರಸಿ, ಸಂಬೆಸ ಬೆರಸಿ,
ಕುಣಿದಿತು ಕುಣಿದಿತು, ಕುಣಿದಿತು ನೋಡೇ
ಮೆಲುಗಾಳಿಯ ಕೇಳೀ — ಓ
ನಲುದಾವರೆಯಾಳೀ—ಕಮಲಿನಿ.

ತರುಗಳ ಸೋಗು, ಲತೆಗಳ ತೂಗು
ನವಿಲದೊ ಅದೊ ಗಿಳಿ ಕೋಗಿಲ ನೋಡೆ
ಬನಕೆ ಬಂತೆ ದನಿಯು– ಈ
ಸವಿಯ ಹಾಲ ಕೆನೆಯು—ಕಮಲಿನಿ.

ತುಂಬಿತು ಮೈಯೀ, ಕೂಡಿತು ಕೈಯೀ
ಸೊಲ್ಲಲಿ ಎಲ್ಲವು ಬಲ್ಲವು ಲಲ್ಲೆಯ
ಬೆಳಕೆ ಹೊರಗು ಒಳಗು—ನೀ–
ಒಲಿದು ಬಲಿದು ಬೆಳಗು—ಕಮಲಿನಿ.

ಅಂಬಿಕಾತನಯ

ಅಂಬುಜವು ತಿಳಿಗೊಳದಿ ತಲೆಯೆತ್ತಿ ನುಣ್ಪಿನಿಂ
ಬಿಣ್ಪಿನಿಂ ನ್ಯೈಗೊಂಡು ಆಲ್ಹಾದ ಬೀರುವದ
ಕಾಣುತಲೆ ನೀ ಸರೋವರ ನಿನ್ನ ಕವನಗಳೆ
ಕಮಲಗಳು ಎಂದೆನಿಪುವು.

ತರಣಿ ಬೆಳಗಿನಲಿ, ಬೈಗಿನಲಿ ಸೊಗ ಚೆಲುಗೊಂಡು
ನಯನಕ್ಕೆ ಹಬ್ಬವಾದಂತೆ ನಿನ್ನಯ ಕಬ್ಬ
ಯುತಿಯಂತೆ ಸತಿಯಂತೆ ಸದ್ಬೋಧ ಶೃಂಗಾರ
ಕವನದಾ ಹಾಸು ಹೊಕ್ಕು!

ದರಹಾಸ ಸುಖವಾಸ ಆನಂದ ತಿಳಿವಿನು–
ತ್ತರಣ ನಿನ್ನಯ ಕಾವ್ಯ ಸುಂದರಿಯ ಚೆಲುವುಗುಣ,
ರೇಖಾ ಗಣಿತದಂತೆ ಬೇಕಾದ ಆಕೃತಿಯ
ಕಟ್ಟುವುದು ನಿನ್ನ ಕವನ.

ಸ್ವಾಭಿಮಾನದ ಮುದ್ದೆ ಹಿರಿಯಕವಿ ನೀನೆದ್ದೆ
ಗತಗನ್ನಡದ ನಾಡ–ಹಿರಿಮೆಯನು ಇನ್ನೊಮ್ಮೆ
ತೆರಿಸಿ ಮೆರೆಯಿಸಲಿಕ್ಕೆ ನಾಡಿಗರನನುಗೊಳಿಸೆ
" ದತ್ತಕವಿ " ಧನ್ಯ! ಧನ್ಯ!

ಧಾರ್‍ವಾಡದಾವಾ

ಇನ್ನೂ ಯಾಕ ಬರಲಿಲ್ಲವ್ವಾ ಧಾರ್‍ವಾಡದಾವಾ
ನಾರದಾಗ ಮೂರ ಸರತಿ ಬಂದು ಹೋಗಾವಾ

ಭಾರೀ ಕಳೆಯು ಮಾರಿ ಮ್ಯಾಲೆ ಕಂಣಮಣಸಾವಾ
ತುಂಬಿ ಮೀಸಿ ತಿದ್ದಿಕೋತ ಹುಬ್ಬಹಾರಸಾವಾ
ಮಾತು ಮಾತಿಗೆ ನಕ್ಕು ನಗಿಸಿ ಆಡಿಸ್ತ್ಯಾಡಾವಾ
ಏನೋ ಕಂಡರ ಏನೋ ಕಟ್ಟಿ ಹಾಡ ಹಾಡಾವಾ

ಕಾವ್ಯಾಸ್ವಾದಕೆ ನಾದದ ಮೋದವೆ ಬೇಕೆಂದಂದಾವಾ
ಸಿಂಗಾರ ನುಡಿಲೇ ಭಂಡಾರಾನಾ ಬೆಳಸೇನಂದಾವಾ
ಮುಸಕನು ಕಳೆದು ನಸುಕನು ಉಳಿದು ದಾಟ ಬಂದಾವಾ
ಜೋಗದ ಮಾರಿಗೆ ಮೂಗುತಿ ಅಂಥಾ ಹಾಡ ಬರೆಯಾವಾ

ತೊರಿಽ ಬಂದರ ಕೊರತೇನಂತ ಜೀವನಕಂದಾವಾ
ಏರೀ ತೆಳಗ ಸಾಗಿ ಬಂದರ ಕೊರತೇನಂಬಾವಾ
ನುಡಿಽನುಡಿಽಗೆ ದನಿಽಯ ಮಾಡಿ ಹಾಡಹಾಡಾವಾ
ವಾರೇ ಅಂತ ಕೇಳಾಕ ಕುಂತರ ಅಂದಽ ಅಂಬಾವಾ.

ಕಾವ್ಯದ ಜೋಡಿ ಕ್ರೀಡಾ ಮಾಡಿ ವಾಹವಾ ಅಂದಾವಾ
ಕನ್ನಡ ಚಿನ್ನದ ಚೂಡಾಮಣಿಯಂತ ನಾಡಲಿ ನಿಂದಾವಾ
ನೆರಳು ಬೆಳಕಿನಾಗ ಸಾಗಿ ಬಂದು ಹಣ್ಣ ಕಂಡಾವ
ಕಣ್ಣಿನ್ಯಾಗಿನ ಗೊಂಬಿಹಾಂಗ ಎದ್ಯಾಗ ನಿಂತಾವಾ.

ತುಟ್ಟಾ ಯಗಾವ ನಗಿ ಕ್ಯಾದಿಗಿ ಮುಡಿದುಕೊಂಡಾವಾ
ಕಂಡಕಣ್ಣಲೆ ಪ್ರೀತಿ–ಬೆಳ್ಳಿ ಬೆಳಗಿಸಿಕೊಂಬಾವಾ
ಜನ್ಮ ಜನ್ಮಕ ಕನ್ನಡದಾಗ ನುಡಿದೇನಂಬಾವಾ
ಎದಿಯೊಳಗಿನ ಹಣತಿ ಮಾಡಿ ಕನ್ನಡ ಬೆಳಗಾವಾ.

ಧಿಟ್ಟರ ಬಿಡಗ ಹಣ್ಣಿನ ಸ್ವಾದ ಹೂವಿನಾ ಭಾವಾ
ಹಾದೀ ಬೀದಿ ನಡಕ ಕಂಡು ಬಿಟ್ಟ ತನ್ನ ಕಾವಾ
ಇಲ್ಲಿ ಅಲ್ಲಿ ದಾರೀ ತೋರಿ ಬೆಳಕ ಬೀರಾವಾ
"ಅಂಬಿಕಾತನಯ ದತ್ತ" ನಂತರೀ ಕವಿ ಕನ್ನಡದಾವಾ.

ಕಮಲವರಳೇದ

ತಿಳಿಯ ನೀರ ಕೊಳದಲೊಂದು
ಕಮಲವರಳೇದ—ಗೆಳತಿ
ಎಳೆಯ ಗಾಳಿ ಸೋಂಕಿಗೊಂದು
ತೆರೆಯು ತೆರಳೇದ—ಗೆಳತಿ ಕಮಲವರಳೇದ.

ಕಂಪು ಜಾಡ ಹಿಡಿದು ಭೃಂಗ
ನೋಡ-ನಾದ ಮೋದ ಗುಂಗ
ಅತ್ತ ಇತ್ತ ಸುತ್ತಿ ಹ್ಯಾಂಗ
ಮತ್ತ ಮರಳೇದ—ಗೆಳತಿ ಕಮಲವರಳೇದ.

ಕುಣಿವುದ್ಯಾಕ ಬಿಂಬ ಭಾನು
ಕಂಡಿತ್ತೇನ ಕಮಲ ಜೇನು
ಸೋಂಕಲೆಂದು ಹೆಣಗಿ ತಾನು
ಸುಳ್ಳ ಕೆರಳೇದ—ಗೆಳತಿ ಕಮಲವರಳೇದ.

ಗಾಳಿ ಬರಲು ಕೊರಳ ಬಾಗಿ
ತೆರೆಯು ಬರಲು ನಡುಕ ತಾಗಿ
ನಡುಗಿ ಹಿಂದೊ ಮುಂದೊ ತೂಗಿ
ಹ್ಯಾಂಗೊ ಹೊರಳೇದ—ಗೆಳತಿ ಕಮಲವರಳೇದ.

ಜೋಗ ಜಲಪಾತ

ಸಾಜವೆಲೆ ಸಹ್ಯಾದ್ರಿ ಸೃಷ್ಟಿ ಸೌಂದರ ಸೂಡು
ಓಜವನು ತೂರುತಿದೆ ತುಂಗ ಶೃಂಗದ ಬೀಡು
ಈ ಜಗದಿ ಆ ಜಗಕೆ ಕೈಯ ಚಾಚಿದೆ ಕಾಡು!
ಜೋಗ ಜಲಪಾತ ನೋಡು!
'ರಾಜ' 'ಅಬ್ಬರ' 'ಬಾಣ' 'ಗೌರವನಿತಾ' ನಾಲ್ಕು,
ಸೋಜಿಗದ ಹೆಸರಿನಲಿ ಹೆಸರ ತಕ್ಕಂತೆಯೇ
ತೇಜ ಸಪ್ಪಳ ಚಿಮ್ಮು ನಯನದಲ್ಲಿ ನಯವಾಗಿ
ನೋಟಕನ ಕರೆಯುತಿಹವು.

ಗಾಂಭೀರ್ಯದಾತಪತ್ರದ ತೇಜ ರಾಜನಲಿ
ರಂಭೋರು ನಯ ಗೌರವನಿತೆ ಇಳಿಜಾರಿನಲಿ
ಕಂಭದಿಂ ಹೊರಬರುವ ನಾರಸಿಂಹನ ಗುಡುಗಿ-
— ನಬ್ಬರವು ಅಬ್ಬರದಲಿ.
ಕುಂಭ ರಂಧ್ರದಿ ನೀರು ಸುತ್ತು ಬಾಣಾಕಾರ
ಜಂಭದಿಂ ಜಿಗಿವ ಜಿಗಿತವು ಬಾಣತಡಸಿಲಲಿ
ಕುಂಭಿನಿಯ ಚಿತ್ರ ಚಿತ್ರದ ಚಿತ್ರ ಚಿತ್ರಿಸುವ
ಚಿತ್ರಕಾರನ ನೆನೆಪುದು.

ಅಚ್ಚವಳ ಸೌಂದರ್ಯ! ಕೃತ್ರಿಮದ ಸೋಂಕಿಲ್ಲ.
ಕೊಚ್ಚುತಿದೆ ನೀರು ಕಲ್ಲನು ಬಲಕೆ ನೆಲೆಯಿಲ್ಲ!
ಹೆಚ್ಚು! ಹೆಚ್ಚಾಗುತಿದೆ ಚೆಲುವು ನಿಟ್ಟಿಸಿದಂತೆ
"ಚೆಲುವು ನಿಜ ನಿಜವು ಚೆಲುವು"
ಅಚ್ಚರಿಯು ಮಾನಂದ ಮೈಯು ನವಿರೇಳುವುದು
ಮೆಚ್ಚಿ ಮನಉಬ್ಬಿ, ಆತ್ಮದ ಹಂಸ ಗರಿಗೆದರಿ
ನಿಚ್ಚತವು ಅಚ್ಯುತನ ಭವ್ಯ ಲೀಲೆಯ ನೆನೆದು
ಮನವು ತನ್ಮಯವಾಗಿದೆ

ವಿಜಯನಗರ

ಕಂಡೆ ನಾ ಹಂಪಿಪುರ ಪಂಪಾಪತಿಯನೀಗ
ಕಂಡೆನೋ ವಿಜಯನಗರದ ವೀರ ದೈವತವ
ಕಂಡೆನೈ ಎನ್ನ ಕುಲದಭಿಮಾನ ಸ್ವಾಮಿಯನು
ಶ್ರೀ ವಿರೂಪಾಕ್ಷನನ್ನು !
ಉಂಡಂತೆನಗೆ ಸಮಾಧಾನವಾಗುವುದೀಗ
ಕಂಡುಕ್ಕುವವು ಹರುಷ ಬಾಷ್ಪಗಳು ಧಾರೆಯಲಿ
ಚಂಡ ಮಾರುತವು ಆಧ್ಯಾತ್ಮದ್ದು ಎದ್ದು
ಓಡಿಸುವದೈ ಮನಕಿಲ್ಬಿಷ!

ವಿಜಯ ನಗರದ ಮೊದಲ ವೈಭವದ ಸಿರಿನೆನಪ
ಗಜಶಾಲೆ ರಾಣಿಯರಮನೆ ಮಾನವಮಿ ದಿಬ್ಬ
ವಿಜಯ ವಿಠ್ಠಲನ ಕಲ್ಯಾಣಮಂಟಪ, ತೇರು,
ರಾಜನ ತುಲಾ–ಭಾರವಾ!
ಅಜನಿಗೂ ದುಸ್ಸಾಧ್ಯವೆನಿಪ ಕಟ್ಟಡ ಕಂಡು
ನಿಜವಾಗಿ, ಮನಸು ಮೈ ಮಾತು ತಲೆವಾಗಿ ಸರ-
ಸಿಜದ ಸಾವಿರ ದಳವ ಕಿತ್ತು ಬಿಸುಟಿದ ತೆರದಿ
ಹಂಪೆಯಾ ಹಾಳು ಬಾಳು!

ಕನ್ನಡರು-ನಮ್ಮವರು ಕಟ್ಟಿ ಆಳಿದ ರಾಜ್ಯ-
ವನ್ನು ಪಾಳ್ಗೈದ ಕೇಡಿಗಳ ಮೇಲ್ ಕಿಡಿಗಳನು
ಸನ್ನುತದ ಸತ್ವಗುಣದವನ ಮನವೂ ಸುರಿಸು—
ವುದು ನೋಡಿ ಪಾಳುಗಳನು
ಇನ್ನು ಇಲ್ಲಿಂದ ಹೊರ ಹೊರಡಲಿಕೆ ಒಪ್ಪದದು
ಎನ್ನ ಮನ, ಪಾಳ್ಮೋಟ ಜಗ್ಗುತ್ತಲಿದೆ ಜೀವ–
ವನ್ನು, ಆ ಹುಕ್ಕ ವಿದ್ಯಾರಣ್ಯರಾ ದಿವ್ಯ
ತೇಜವದು ಎನಿತೊಮಹಿಮೆ!

ಶಿಲಾಬಾಲೆ

ಮೈ ಮಣಿಸಿ, ಕೈ ಮಣಿಸಿ
ಕಾಲ್‌ಕುಣಿಸಿ, ಕಣ್‌ಕುಣಿಸಿ
ಮನಸೂರೆಗೊಳುವ 'ಕಲ್‌ಕನ್ಯೆ' ರನ್ನೆ
ನಿನ್ನ ನಿಲುವಿನ ರೀತಿ
ಮೊಗದಲುಕ್ಕುವ ಪ್ರೀತಿ
ಭಾವದುಂಬಿಗ ಚರ್ಯೆ ಚೆನ್ನೆ! ಹೊನ್ನೆ!

ಮೈ ಮಣಿತದಾ ಹೊಳವು
ನಾಗನಿಗು ಅಸದಳವು
ಮೊಗದಿ ಸೂಸುವ ಭಾವ ಕಾವ್ಯ ಸ್ಫೂರ್ತಿ
ನಯದ ನಯಕೂ ಮಿಗಿಲು
ಮಾಟದಾಟಕು ದಿಗಿಲು
ಮೈಮನವ ಕುಣಿಸುವುದು ನಿನ್ನ ಮೂರ್ತಿ

ನವಿಲನಡೆ ಪಾರಿವದ-
ಯಮಕ, ಕೋಗಿಲೆ ರವದ
ಗಿಳಿಯ ಗಮಕದ ಎರಕವೇನೆ ನೀನು?
ಚಿತ್ತದೇ-ಕಾಗ್ರತೆಯು
ಸೌಂದರ-ಸಮಗ್ರತೆಯು
'ಶಿವ-ಸತ್ಯ-ಸುಂದರ'ದ ಮೂರ್ತಿ ಏನು?

ಕ್ರಾಂತಿ ಧೀರ

ಗಳಿಗೆ ಇದೇ ಏರೋ ಧೀರಾ!

ಹನಿಹನಿ ಹನಿಹನಿ ಧಾರಾಕಾರಾ
ಬಾನಿಗು ಭೂಮಿಗು ಏಕಾಕಾರಾ
ಜಾಳಿಗೆ ಹೆಣೆದಿದೆ ಪುಟ್ಟಾ ಪೂರಾ
ಗಳಿಗೆ ಇದೇ ಏರೋ ಧೀರಾ.

ತುಂಬಲಿ ಹೊರಸೂಸಲಿ ಆ ಹೊಳೆ ತೊರೆ
ಕೋಡಿ-ಯೊಡೆಯಲ್ಲೈ ಬಿಡು ಆ ಕೊಳ ಕೆರೆ
ತರುಲತೆ—ಮನೆಮಠ ಕಂಬನಿ ಸುರಿಸಿರೆ
ಗಳಿಗೆ ಇದೇ ಏರೋ ಧೀರಾ.

ಇಲ್ಲಿ ಅಲ್ಲಿ ಎಲ್ಲೆಲ್ಲಿಯು ನೀರು,
ಕೊನೆಯಾಸರವದಕಿದೆ ಮುನ್ನೀರು
ನಿನ್ನಯ ನೆಲೆ ನೀ-ಸಾರಲು ಹೋರು
ಗಳಿಗೆ ಇದೇ ಏರೋ ಧೀರಾ.

ಹನಿಹನಿ ಸೋಪಾನವ ನೀ ಹತ್ತಿ
ಮಿಂಚ ಹಿಡಿದು ಆ ಕಪ್ಪನು ಕೆತ್ತಿ
ಗುಡುಗಿ-ನೊಡಲ ಸಿಡಿ-ಮುಗಿಲನು ಎತ್ತಿ
ಗಳಿಗೆ ಇದೇ ಏರೋ ಧೀರಾ

ಕಾಣುತ ಬಾನಿನ ನೀಲಿಮ ಕಾಂತಿ
ತತ್ವಮಸಿಯ ಸಿರಿ ತಿಳಿವಿನ ಶಾಂತಿ
ಚಿರಕಾಲವು ನಡೆಯಲಿ ಈ ಕ್ರಾಂತಿ
ಗಳಿಗೆ ಇದೇ ಏರೋ ಧೀರಾ

ಏ ನಾರಿ

ಏ ನಾರಿ,

ಮುದ್ದು ನಿನ ಮಾರಿ । ಸಿಂಗರದ ಸೂರಿ
ಹೊರಟಿ ಒಯ್ಯಾರೀ । ಮಿಕಿ ಮಿಕಿ ನೋಡತದ ಕೇರಿ.

ಹೂ ಬಾಣ.

ಮನೆಯು ತೋರ್ಣ । ಮಾಡಿದನ ಜಾಣ
ನಡಿಗಿ ಝುಣಝುಣ । ನೀನಿಲ್ಲ ಮನಕೆ ಖಣ ಭಣ.

ಮುಂಗುರುಳು

ಚೆಲುವಿನಾ ಸುರಳಿ । ಮಾರಿ ಹೂ–ವರಳಿ
ನೋಟ-ಮರಮರಳಿ । ಹೊರ ಹೊರಳಿ ನೋಡತದ ಎರಳಿ!

ನೀ ನಿಲ್ಲು

ವಸಂತನ ಚೆಲ್ಲು । ಕೋಗಿಲೆಯು ಸೊಲ್ಲು
ತಿಂಗಳೆಲ್ಲೆಲ್ಲೂ । ಭೂತಾಯಿ ತುಂಬ ಎಳೆನೆಲ್ಲು!

ಚಲ್ಲಾಟ,

ಒನಪಿನ ಮಾಟ । ಸೆರಗ ಹಾರಾಟ
ಕಳ್ಳಕುಡಿ ನೋಟ । ಕೂಡಿದ್ದ ನಾರಿ ನಿನ ಆಟ!

ನಿನ ನೆಳಲು

ಹೊಯ್ದಾಡೊ ಹೆಳಲು । ಅಲೆ ಅಲೆಯ ಹೊನಲು
ಮೌನದಾ ಕೊಳಲು । ನಿನ್ನಿಂದ ತುಂಬಿತೀ ಹೊಳಲು

ನಿನ ಒಲವು

ಹರುಷದಾ ಚೆಲುವು । ನಿನ್ನ ಗುಣ ನಲುಮು
ಪ್ರೀತಿಯಾ ಸುಳಿವಾ । ನೀನದಕ ನಿಸರ್ಗದ ಕುಲವು.

ನೀ ನಕ್ಕಿ

ಮನದ ಮುನಿ ಉಕ್ಕಿ । ಜೀವದಾ ಹಕ್ಕಿ.
ಸಂತಸದಿ ಸೊಕ್ಕಿ । ಬಗೆ ಮುಗಿಲ ತುಂಬ ಚಿಕ್ಕಿ ಚಿಕ್ಕಿ

ಕೂಸಾಗಿ

ಮೆಚ್ಚ ಮಡದ್ಯಾಗಿ । ತವರ ತಾಯಾಗಿ
ಹಬ್ಬಿಸಿದಿ ಸುಗ್ಗಿ । ಅದಕಂತ ಭಾಗ್ಯದಾ ಬುಗ್ಗಿ

ನೀ ಶಕ್ತಿ

ಮಾಯೆಯಾ ಯುಕ್ತಿ । ನಿನ್ನದೀ ಭಕ್ತಿ
ತಿಳಿದರೂ ಮುಕ್ತಿ । ಸರ್ವದಾ ಸತ್ಯವೀ ಉಕ್ತಿ !

ಶರಣ

ತಿಂಗಳನ ಜೊನ್ನ
ಮಂಗಳನ ರನ್ನ
ಭೂತಾಯಿ ಚೆಲುವ ಚಿನ್ನ
ಇರುಳಿಲ್ಲ ಶಾಂತ
ಲೋಕವೆ ನಿಶಾಂತ
ಏಕಾಂತ-ಕಾಂತ-ಕಾಂತ.

ಮನದೆದುರು ಬಂದು
ಚಿತ್ತದಲಿ ನಿಂದು
ಮಹಿಮೆಯನು ತೋರಿಪಂದು
ಮೈಮನಸು ಸುಂದು
ಬುದ್ಧಿಯದು ದುಂದು
ಆನಂದ ನೂರು ಒಂದು

ಹೊರಗೊಳಗು ಎಲ್ಲು
ಅದೆ ಒಂದು ಸೊಲ್ಲು
ಎಳೆಗಾಳಿ ನಯದ ನೆಲ್ಲು
ಏನಿಲ್ಲ; ಎಲ್ಲ–
ಇದೆ; ಯಾವ ಬಲ್ಲ
ಗೆಲು ಸೋಲನರಿತ ಮಲ್ಲ!

ಮಣಿದಿಹುದು ತನುವು
ತಣಿದಿಹುದು ಮನವು
ಚಿತ್ರವೇ ಚೈತ್ರವನವು!
ಚಿಗುರಾಂತು ಹೂತು
ಹೂವುದುರಿ ಕಾತು.
ಬಿಸಿಲಿಂದ ಸಫಲವಾತು.

ಪುರುಷನದೆ ಆಟ
ಪ್ರಕೃತಿಯದೆ ಮಾಟ
ಜೀವಿಗಳೆ ಆವರ ಬೇಟ
ತಿಳಿದವನೆ ಶರಣ
ಒಳಗೆಳೆಯೆ ಕರಣ
ಅವಗಿಲ್ಲ ಜನನ ಮರಣ!

ಸೋಹಮನ್ನು ಸೇರಿತ

ಬೆಳಗ ಮಗ್ಗಿ ಅರಳಿಧಾಂಗ
ಒಳಗ ಬೆಳಕು ಬೆಳಗಿತ.
ಮನದ ಮಡುವು ತುಳುಕಿತ
ಹೂವ ಬಂಡು ಹರಡಿಧಾಂಗ
ಹರುಷ ಮೈಯ ತುಂಬಿತ
ಹುರುಪು ಎಲ್ಲ ಸೂಸಿತ

ಬಿಸಿಲಿಗೂನು ಬಾಡದ್ನ
ನಸುನಗೀಯ ನಕ್ಕಿತ.
ಮೈಯ ತುಂಬಿ ಉಕ್ಕಿತ
ಮನಕೆ ಬೇಕು ಎನಿಪುದೆಲ್ಲ
ತನಗೆ ತಾನ ಬಂದಿತ
ತೃಪ್ತಿ ತುಂಬಿ ನಿಂದಿತ.

ಏಕದಾರಿ ನಾದ ತುಂಬಿ
ಹಾಡ–ಜೋಡ–ನೀಡಿತ.
ದನಿಗೆ ದನಿಯು ಕೂಡಿತ.
ಬಾಳ ಹಾಡ ಇನಿಯ ದನಿಗೆ
ಕಾಡು ಮೋಡು ಕೊನರಿತ,
ಪೂಜೆಗಾಗಿ ಹೂತಿತ.

ಮಲೆಯ ಹತ್ತಿ ತಲೆಯನೆತ್ತಿ
ಹಕ್ಕಿ ಕೇಕೆ ಹಾಕಿತ
ನಕ್ಕು ನಗೆಯ ತಾಕಿತ
ಜಗದ ಸೊಗದ ನಗೆಯ ಬಗೆಯ
ತಾಣ ತಾನ ತೋರಿತ
ಸೋಹಮನ್ನು ಸೇರಿತ!

ನಾ ಶರಣು ಬಂದೆ ಮನದನ್ನ !

ನೀನಿಷ್ಟು ದಯೆಯ ತೋರಿರುವಿ
ತಿರುಗಿ ನಾ ಹ್ಯಾಗೆ ಅರ್ಪಿಸಲಿ ನನ್ನ
ನಾ ಶರಣು ಬಂದೆ ಮನದನ್ನ !

ನಡೆಯೆಂದೆ ನೀನು, ನಾ ನಡೆದು ಬಂದೆ ಸಂಸಾರ ಸುತ್ತಿನಲ್ಲಿ
ನೀ ಸೂತ್ರಧಾರ ನಾ ಕುಣಿವ ಗೊಂಬೆ ನಿನ ಬೆರಳ ಗತ್ತಿನಲ್ಲಿ
ಎನಿತೆನಿತು ಜೀವ ಎನಿತೆನಿತು ಭಾವ ಬೆಳಗುವವೊ ಬಾಳನಲ್ಲಿ
ಕಂಡಿರುವೆನಯ್ಯ ಕೈವಾಡ ಒಂದೆ ಪ್ರತಿ ಆಳು ಆಳನಲ್ಲಿ.

ಅಪರಂಪಾರ ಕಡಲಂತರಾಳದಲಿ ಮೂಡಿ, ಮೂಡಿ ಬರುತ.
ಘೋರ್ಗರೆದು ನೆರೆದು ನೊರೆಗೂಡಿ ತೆರೆಗಳದೊ ಉರುಳಿ ಬರುತ
ನಿರುತ
ಆಸರವ ಪಡೆದು ಭೂತಾಯ ಮಡಲಿನಲಿ ಲೀನವೆಂತೊ ಅಂತು
ಜೀವನದ ಲಹರಿ ಲಹರಿಗಳ ಕೊನೆಯ ಆಸರನೆ ವಿಶ್ವತಂತು.

ಮೈಮನಸು ಬುದ್ಧಿ ಮಾತೆಲ್ಲ ನಡೆಯುತಿದೆ ನಿನ್ನ ದಯದಿ ದೇವಾ
ಹಿಂದಿಂದು ಮುಂದು ಕಾಯುತ್ತ ಬಂದಿರುವೆ ನೀನೆ ನನ್ನ ಕಾವಾ
ಓ ಸದಾ ಸರ್ವದಾ ಇದೇ ನೆನವು ತುಂಬಿರಲಿ ಎನ್ನ ಭಾವಾ
ಮಿಡಿಮಿಡಿದು ನಿನ್ನ ಚರಣದಲಿ ಲೀನವಿರಲಿ ಇರಲಿ ಎನ್ನ ಜೀವಾ !

ಹೃದಯ-ಉದಯ

ಮೂಡಿ ಬಂದಽದ ಉದಯಾ
ತುಂಬಿ ನಿಂದಽದ ಹೃದಯಾ

ಕಪ್ಪು ಕಲೆಯ ಮಾಯೆಯಿಂದ
ನೆಪ್ಪು ನೆಲೆಯ ಛಾಯೆಯಿಂದ
ಒಪ್ಪು ಬಲೆಯ ಕಾಯದಿಂದ
ಮೂಡಿ ಬಂದಽದ ಉದಯಾ ಮೂಡಿ ಬಂದಽದ

ನಲುವೆ ರಸವಾ ಊಟಿ ಚಿಮ್ಮಿ
ತಿಳಿಯ ಬೆಳಕ ಕಿರಣ ಹೊಮ್ಮಿ
ಎಳೆಯ ಬಳ್ಳಿ ಗಿಡವ ನೆಮ್ಮಿ
ತುಂಬಿ ಬಂದಽದ ಹೃದಯಾ ತುಂಬಿ ಬಂದಽದ

....

ತುಂಬಿ ನಿಂದಽದ ಹೃದಯಾ
ಮೂಡಿ ಬಂದಽದ ಉದಯಾ
ಕತ್ತಲೊಳಗ ಬೆಳಕು ಹೊಕ್ಕು
ಸುತ್ತಲೆಲ್ಲ ನೆಲವು ನಕ್ಕು
ತಿಳಿವು ಬೆಳಕು ಹಾಸು ಹೊಕ್ಕು
ಕಾಣ ಬಂದಽದ ಉದಯಾ ತೋರಿ ನಿಂದಽದ

ಬಣ್ಣ ಬಣ್ಣ ಬಾನ ಕಂಡು
ಮನವು ಬೆಳಕ ಸವಿಯನುಂಡು
ಆಯಿತಲ್ಲಽ ಪುಟಿದ ಚೆಂಡು
ಮೀರಿ ಹೋಗೇದ ಹೃದಯಾ ಮೂಕ ಆಗೇದ

ಮಾಡೊ ಹೃದಯಾ
ನೋಡೋ ಉದಯಾ

ಮಂತ್ರ

ಯಾಕೋ ಏನೋ ಹ್ಯಾಂಗೋ ಎಲ್ಲ್ಯೋ
ಮಬ್ಬು ಕವಿದಿತ್ತಽ
ಎಂಬುದು ಮಾತ್ರ ಗೊತ್ತಿತ್ತ

ದುಡಿತದ ಮಿಡಿತಕೆ ಹೃದಯದ ವೀಣೆಯು
ಇನಿದನಿ–ಗುಡುತಿತ್ತಽ
ಚಿಂತಿಗೆ ತಾಣವಿಲ್ಲದಿತ್ತ

ಹರಯದ ಸಿರಿಯಲಿ ಪ್ರಿಯ ವಸಂತವು
ಚಿಗುರಿ ಚಲ್ಲಿದತ್ತಽ
ಸನಿಕೊನಿ ಪೂರಾ ಬಿಟ್ಟಿತ್ತ

ಹಿರಿಯರು ಮಾಡಿದ ಹೊಲಮನಿ ಒರತಿ
ಬಸಿದಽ ಬಸಿತಿತ್ತಽ
ಎಲ್ಲಾ ಸಾಕಾದಷ್ಟಿತ್ತ

ಹೆಣ್ಣು ಹೃದಯದಾ ಹೂವು ಅರಳಿದಾ
ನಲ್ಲೆಯ ಜತೆ ಇತ್ತ
ಹರುಷಕೆ ಏನು ಕೊರತೆ ಇತ್ತ

ಆದರು ಯಾಕೋ ಆದರು ಹ್ಯಾಂಗೋ
ಎಲ್ಲೋ ಕೊರತಿತ್ತಽ
ಎಂದೇ ಮನಸಿಗೆ ಅನಿಸಿತ್ತ

ಯಾಕೋ ಏನೋ ಹ್ಯಾಂಗೋ ಎಲ್ಲ್ಯೋ
ಎಂಬುವದೀ ತಂತ್ರ
ಮರೆಯಿಸೆ "ಮಹಾಶೂನ್ಯ" ಮಂತ್ರ!

ಚೇತನದ ತೇಜ ಬಾರಣಾ!

ಆಗೇದೊ ಬಾಳು ಭಣ ಭಣಾ
ಬದುಕು ಒಣ ಒಣಾ
ಯುಗವೊ ಚಣ ಚಣಾ
ಚೇತನದ ತೇಜ ಬಾರಣಾ.

ಕಳೆಗುಂದಿರುವವೊ ಕಣ್ಣಾಲಿ
ನಿರಾಸೆಯ ಜೋಲಿ
ನಿಷ್ಕ್ರಿಯತೆ ಶೂಲಿ.
ಹಿಡದದ್ವದೊ ಒಡಮುರಿದು ವಾಲಿ

ಕಣ್ಣೆದುರಿಗೆಲ್ಲ ಕತ್ತಲು
ಸುತ್ತುಮುತ್ತಲು
ವಿಶ್ವ ಬತ್ತಲು
ಕೊಡು ಕೈಗೆ ಕೈಯ ಎತ್ತಲು

ಒಣಗೇದ ಬಳ್ಳಿ ರಸವಾರಿ
ದುಗುಡ ಮಿತಿ-ಮೀರಿ
ಕಾಳ ನಂಜೇರಿ
ಕುಡಿ-ಯೊಡೆಯಿ ಸುರಿಸೊ ಬಲ್ ಸರಿ!

ಈ ಮನದ ಮೇಘ ಮಿಂಚಾಡೆ
ಗುಡುಗಿನೊಡಗೂಡೆ
ಸಿಡಿಲು ಹೊಡೆದೋಡೆ
[illegible] ಬೆಳಕೆ ನಿನಗೇಡೆ?

ಪೃಥ್ವಿ !

ಮೂಡಿ ಬಾ, ಪೃಥಿವಿ ಮೂಡಿ ಬಾ

ನೀರ ನುಡಿಯೊಡನೆ
ಲತೆಯ ಮಿಡಿಯೊಡನೆ
ಹೂವ ಹುಡಿಯೊಡನೆ
ಆಡಿ ಬಾ

ಬಾನ ಬಯಲೊಡನೆ
ಹಕ್ಕಿ ಹುಯಿಲೊಡನೆ
ಬೆಳೆಯ ಕುಯಿಲೊಡನೆ
ಕೂಡಿ ಬಾ

ಮಣ್ಣು ಹಣ್ಣಾಗಿ
ನೀರು ತೇರಾಗಿ
ಬೆಳಕು ಪುಳಕಾಗಿ
ತುಳುಕಿ ಬಾ

ಪೊಳ್ಳು ಮಳ್ಳಾಗಿ
ಉಸಿರು ಹಸಿರಾಗಿ,
ಚೆಲುವು ಒಲುವಾಗಿ
ಬಳುಕಿ ಬಾ.

ಮಣ್ಣ ಬಣ್ಣದಲಿ ಕುಣಿಸಿ ಬಾ
ಹೊನ್ನ ಹಸಿರಿನಲಿ ಹಣಿಸಿ ಬಾ
ಜೀವ ಜೀವನದಿ ತಣಿಸಿ ಬಾ

ಮೂಡಿ ಬಾ, ಪೃಥಿವಿ ಮೂಡಿ ಬಾ

....

ಕೋಗಿಲೆಯ-ನಾಂತ
ಗಿಳಿ ಬಳಗ ನಿಂತ
ಇದೋ ಸೋಗೆ-ಗುಣಿತ ಕಾಣೆ
ನದಿ ತುಂಬಿತುಡಿಯೆ
ಮರವಿಂದು ಮಿಡಿಯೆ
ನುಡಿನುಡಿಯೆ ನನ್ನ ಜಾಣೆ.

ಮಧುಮಾಸ ನಕ್ಕು
ಮಳೆಗಾಲ ಉಕ್ಕು
ಸರ್ವದಾ ಮಿಕ್ಕು ಕಾಯಿ
ಸಿರಿರತ್ನ ಬಸಿರೆ
ಇದು ನಿನ್ನ ಹೆಸರೆ
ಕೊರಳ್ತುಂಬಿ ಉಸಿರೆ ತಾಯಿ!

ನುಡಿಯೆ ಬಂದಂತೆ
ಉಡಿಯೆ ಮಿಂದಂತೆ
ಒಡೆಯ ನಿಂದಂತೆ
ಮೂಡಿ ಬಾ.

ಮೂಡಿ ಬಾ ಪೃಥಿವಿ ಮೂಡಿ ಬಾ

....

ಹೆಚ್ಚು ಕಡಿಮೆಗಳು ಇಲ್ಲ ಬಾ
ಹುಚ್ಚು ನಚ್ಚು ಇದು ಅಲ್ಲ ಬಾ
ಕೆಚ್ಚು ಕೊನರುತಿದೆ ಸೊಲ್ಲ ಬಾ

ಮೂಡಿ ಬಾ, ಪೃಥಿವಿ ಮೂಡಿ ಬಾ

ಚಲ್ಲವರಿ ಸುತ್ತು ನಡೆಯ ಬಾ
ಸೊಲ್ಲ ಸವಿ ಸವಿಯ ನುಡಿಯ ಬಾ
ಮಲ್ಲಿಗೆಯ ಮಲರ ಮುಡಿಯ ಬಾ

ಪುಟಿದ ಚಂಡಂತೆ
ಹುಡುಕಿ ಕಂಡಂತೆ
ಹಸಿದು ಉಂಡಂತೆ
ತಣಿದು ಬಾ

ನಿನ್ನನಾಳುವೆವು
ಎಂದು ಹೇಳುವೆವು
ನಮ್ಮ ಬಾಳುವೆಯು
ಗೋಳು! ಬಾ.

ಬಾಳಿನಾಳಿಂದು
ಆಳುವವನೆಂದು
ಪೇಳ್ವ ಕೊಳಕಿಂದು
ಕೀಳು! ಬಾ

ಕೀಳು ಮೇಲಹುದು ವಿರಸ ಬಾ,
ಬಾಳಿನಲ್ಲಿ 'ಸಮ' ಸರಸ! ಬಾ
ಆಳಿನಾಳಹುದು ಅರಸ! ಬಾ.

ಮೂಡಿ ಬಾ ಪೃಥಿವಿ ಮೂಡಿ ಬಾ.

ಬೇಡಿಕೆ

ಬೇಡಿಕೆ ಇದೊಂದೆ ಒಂದೇ
ಕಾಪಾಡೊ ನಮ್ಮನೆಂದೆಂದೆ

ಚಂದ್ರನ ತಿಂಗಳಿರುಳಾಗ
ತಂಪನ್ನ ಮರದ ನೆರಳಾಗ
ತುಂಬಿದ ಕರುಣೆ ಕರುಳಾಗ
ಬಂದಿಹೆನು ನಿನ್ನಡಿಗೆ ತಂದೆ!

ಜತೆ ಜತೆಗೆ ಕೈಯು ಜೋಡಿಸಿ
ಹಿತ ಮಿತದಿ ಕಣ್ಣ ಕೂಡಿಸಿ
ಪ್ರತಿಬಿಂಬ ಮನದಿ ಮೂಡಿಸಿ
ಬಂದಿಹೆನೊ ನಿನ್ನಡಿಗೆ ತಂದೆ !

ಬಾಳಿನಲಿ ಹೆಣಗಿ ಮೈ ಮರೆತು
ಹಣ್ಣಾದೆ ದೇವ ನಿನ್ ಹೊರತು
ನೆನೆಯುವೆನೊ ಈಗ ನಾ ಬೆರೆತು
ಬಂದಿಹೆನೊ ನಿನ್ನಡಿಗೆ ತಂದೆ

ಎದೆದುಂಬಿ ದೇವ ನಿನ ನೆನೆಯು
ಕಣ್ ತುಂಬಿ ಬಂದು ಹನಿಹನಿಯು
ಮೋಟಿಲ್ಲ ಚಿಗಿತು ನೆನೆ ಕೊನೆಯು
ಬಂದಿಹೆನೊ ನಿನ್ನಡಿಗೆ ತಂದೆ.

ತವ ಚರಣದಿ ಎನ್ನೀ ಹರಣ
ಅರ್ಪಣವೆಲೆ ಶರಣರ ಶರಣ
ಎದೆ ಬೆಳಗಲಿ ಬೆಳಕಿನ ಕಿರಣ
ಬಂದಿಹೆನೊ ನಿನ್ನಡಿಗೆ ತಂದೆ.

ಕೊಳಲೂದು

ಊದೊ ಊದು ಕೊಳಲೂದು.

ಕೊಳಲೂದೊ ಊದು ಕುಣಿ ಕುಣಿವೆ ನೋಡು ನಾ
ರಾಗ ತಾಳ ಲಯ ಮಧುರ ಮೋಹನಾ
ಊದೊ ಊದು ಕೊಳಲೂದು.

ಯಮುನೆ ಮೃದುಗಮನೆ ನಾದಲೋಲೆ
ಆರಾಧೆ ನಲುಮೆಯಾಗಾಧೆ ಸೋಲೆ
ವೃಂದಾವನದ ಯೌವನದ ಬಾಲೆ
ತನ್ಮಯಳೊ ಚಿನ್ಮಯಳೊ ಏನೊ ಲೀಲೆ
ಕೊಳಲೂದೊ ಊದು ಕೊಳಲೂದು

ಹಾವು–ಆವು ಹೆಡೆ-ತಲೆಯ ತೂಗುತಿವೆ
ನೀರು ನೆಲವು ನಿಶ್ಶಬ್ದ ನೂಗುತಿವೆ
ಬಳ್ಳಿ ಮಳ್ಳಿ ಮೈದುಂಬಿ ಬಾಗುತಿವೆ
ಬಾನಚಿಕ್ಕಿ ಮೌನದಲಿ ಸಾಗುತಿವೆ
ಊದೊ ಊದು ಕೊಳಲೂದು.

ಸವಿಗಾನ ತಾನ ತಾನದ ವಿತಾನದಲಿ
ನಾನು ನೀನು ಮೈಮರೆತು ಲೀಲೆಯಲಿ
ಬೆಳಕು ಬೆಳಕಿನಲೆ ತುಂಬಿ ತೇಲುತಲಿ
ದೂರ ದೂರ ಬಲುದೂರ ಮೌನದಲಿ
ಕೊಳಲನೂದೊ ಊದು
ಶಾಮಾ! ಊದೊ ಊದು ಕೊಳಲ

ತಡಿಗೆ ತಲುಪಿಸಯ್ಯ

ನಿನ್ನ ಹೊರತು ಯಾರೊ ಗತಿ ಶಾಮ ಮೋಹನಾ
ಭಗವಾನ ತಡಿಗೆ ತಲುಪಿಸಯ್ಯ ನನ್ನ ನಾವನಾ

ನನ್ನ ಹರುಷ ಬಾಳ ಕುಡಿಯ ಕರ್ಮ ಕುಯ್ದನೋ
ನನ್ನ ಸೊಗದ ಮೊಗ್ಗ ದೈವ ಶುಷ್ಕ ಗೆಯ್ದನೋ
ಉಳಿಸೊ ಎನ್ನ ಲಜ್ಜೆ ನೀನೇ ಕೊಳಲಮೋಹನಾ
ಭಗವಾನ ತಡಿಗೆ ತಲುಪಿಸಯ್ಯ ನನ್ನ ನಾವನಾ.

ಹರುಷದೊರತೆ ಒಣಗಿತಯ್ಯೊ ಕೊರತೆ ಬಾಳಿಗೆ
ನಾಮ ಮರೆತೆ ನಿನ್ನ ಹೊರತೆ ನನ್ನ ಏಳಿಗೆ
ಸುರಿಸೊ ಸೊಗದ ಸೋನೆ ದೇವಾ ಗೋಪ ಜೀವನಾ
ಭಗವಾನ ತಡಿಗೆ ತಲುಪಿಸಯ್ಯ ನನ್ನ ನಾವನಾ

ಪೂಜೆ ಪೂರ ಆಗಲಿಲ್ಲೊ ಉಳಿಯಿತಾರತಿ
ಓ ಪ್ರೇಮ ಶಾಮ ಕೂಗಿ ಕೂಗಿ ಮೀರಿತೋ ಮಿತಿ
ಕೊಳ್ಳೊ ಕರೆದುಕೊಳ್ಳೊ ಎನ್ನ ನಂದ ನಂದನಾ
ಭಗವಾನ ತಡಿಗೆ ತಲುಪಿಸಯ್ಯ ನನ್ನ ನಾವನಾ

ಒರಟು—ಮಲ್ಲಿಗೆ

ಒಂದೆ ವಂದನವೊ ದೇವಾ ಒಂದೆ ವಂದನಾ
ಮೋಹಕ ಘನಶ್ಯಾಮ ಸುಂದರ! ನಂದ ನಂದನಾ

ಸುರಲೋಕದ ಕಂಪನಾಂತ
ತುಂಬ ಹೂತ ಪಾರಿಜಾತ
ಕಂಪನಿಳೆಗೆ ಸುರಿಸುವಂತೆ
ಒಂದೇ ವಂದನಾ

ಮೆಲುಮಾರುತ ಗಂಧಗೂಡಿ
ಎಳೆಯ ಮಗುವಿನಂತೆ ಓಡಿ.
ಭೂಮಿ ತಾಯ್ಗೆ ಬಾಗುವಂತೆ
ಒಂದೆ ವಂದನಾ

ತೆರೆಗಳ ಮುಟ್ಟಾಟದಲ್ಲಿ
ಕಮಲ ಒಲಿದು ಒಲುವಿನಲ್ಲಿ
ಬಾಗಿ ನೀರ ತಾಗುವಂತೆ
ಒಂದೆ ವಂದನಾ

ಭಕ್ತಿದುಂಬಿ ಭಾವಗೊಂಬಿ
ನಿನ್ನ ನೋರ್ವನನ್ನೆ ನಂಬಿ
ನೆಟ್ಟ ನೋಟ ನೋಡುವಂತೆ
ಒಂದೆ ವಂದನಾ

ಕಂಡ–ಕಂಣು ಕುಣಿದು ಕುಣಿದು
ಮನವು ಧ್ಯಾನದಿಂದ ಮಣಿದು
ಸಕಲೇಂದ್ರಿಯ ತಂದ್ರಿಯಲ್ಲೆ
ಒಂದೇ ವಂದನಾ